ಮರಗಳ್ಳತನ ಪ್ರಕರಣಗಳು

858 (793); ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಮಡಿಕೇರಿ)

ಅ) ರಾಜ್ಯದಲ್ಲಿ ದಾಖಲಾಗಿರುವ ಮರಗಳ್ಳತನ ಪ್ರಕರಣಗಳು ಎಷ್ಟು; (ವಿವರ ನೀಡುವುದು)

ಆ) ಮರಗಳ್ಳತನ ಪ್ರಕರಣ ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ದಾಖಲಾಗಿರುವ ಮರಗಳ್ಳತನ ಪ್ರಕರಣಗಳ ವಿವರಗಳನ್ನು ಅನುಬಂಧದಲ್ಲಿ ವಿವರಿಸಿದೆ.

ಆ) ಅರಣ್ಯೋತ್ಪನ್ನಗಳ ಅಕ್ರಮ ಸಾಗಾಣಿಕೆಯನ್ನು ತಡೆಗಟ್ಟಲು ಇಲಾಖಾ ವಾಹನಗಳಲ್ಲಿ ಹಗಲು/ರಾತ್ರಿ ನಿರಂತರವಾಗಿ ಪ್ರಾದೇಶಿಕವಾಗಿ ಮತ್ತು ಅರಣ್ಯ ಸಂಚಾರಿದಳದ ಮುಂಚೂಣಿ ಸಿಬ್ಬಂದಿಗಳಿಂದ ಗಸ್ತು ಕಾರ್ಯಾಚರಣೆಗಳನ್ನು ಮತ್ತು ಅರಣ್ಯ ತನಿಖಾ ಠಾಣೆಗಳ ಮೂಲಕ ಹಾದುಹೋಗುವ ಅರಣ್ಯ ಉತ್ಪನ್ನಗಳ ವಾಹನಗಳನ್ನು ತನಿಖಾ ಠಾಣೆಗಳಲ್ಲಿ ತಪಾಸಣೆಗೆ ಒಳಪಡಿಸಿ ನಿಯಮಾನುಸಾರ ಕಾನೂನು ರೀತ್ಯಾ ಕ್ರಮಗಳನ್ನು ಅನುಸರಿಸಲಾಗುತ್ತಿದೆ. ಅತೀ ಸೂಕ್ಷ್ಮ ಪ್ರದೇಶಗಳಲ್ಲಿ ಕಳ್ಳ ಬೇಟೆ/ಕಳ್ಳ ಸಾಗಣಿಕೆ ಚಟುವಟಿಕೆಗಳ ಮೇಲೆ ತೀವ್ರ ನಿಗಾವಹಿಸಲಾಗುತ್ತಿದೆ.

ಅನುಬಂಧ

ರಾಜ್ಯದಲ್ಲಿ ದಾಖಲಾಗಿರುವ ಮರಗಳ್ಳತನ ಪ್ರಕರಣಗಳ ವಿವರಗಳು ಈ ಕೆಳಿನಂತಿದೆ

ಕ್ರ.ಸಂ.	ವೃತ್ತ/ ಅರಣ್ಯ ಸಂಚಾರಿ ದಳ	ಪ್ರಕರಣಗಳ ಸಂಖ್ಯೆ
1	ಬೆಂಗಳೂರು	341
2	ಬೆಳಗಾವಿ	124
3	ಬಳ್ಳಾರಿ	---
4	ಚಿಕ್ಕಮಗಳೂರು	114
5	ಚಾಮರಾಜನಗರ	31
6	ಧಾರವಾಡ	361
7	ಕಲಬುರಗಿ	292

8	ಹಾಸನ	326
9	ಕೊಡಗು	203
10	ಕೆನರಾ	492
11	ಮೈಸೂರು	392
12	ಶಿವಮೊಗ್ಗ	990
13	ಮಂಗಳೂರು	851
14	ಅಸಂದಳ, ಬೆಂಗಳೂರು	41
15	ಅಸಂದಳ, ಬಳ್ಳಾರಿ	-
16	ಅಸಂದಳ, ಬೆಳಗಾವಿ	24
17	ಅಸಂದಳ, ಕಲಬುರಗಿ	-
18	ಅಸಂದಳ, ಹಾಸನ	58
19	ಅಸಂದಳ, ಶಿವಮೊಗ್ಗ	102
20	ಅಸಂದಳ, ಶಿರಸಿ	76
21	ಅಸಂದಳ, ಮೈಸೂರು	144